**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 88/2020**

**ಚಾ.ಸಾಃ 8, ಪ್ರಾ.ಸಾಃ 5**

| | |
|---|---|
| ಸಾಕ್ಷಿದಾರನ ಹೆಸರು | ಅತಿಥ್ ನಾಯ್ಕ |
| ತಂದೆಯ ಹೆಸರು | ವಿಜಯ ನಾಯ್ಕ |
| ವಯಸ್ಸು | 30 ವರ್ಷಗಳು |
| ಉದ್ಯೋಗ | ವ್ಯವಸ್ಥಾಪಕ, ಮಾರುತಿ ಸುಜುಕಿ ಕಂಪನಿ, ಬೆಂಗಳೂರು |
| ವಾಸ್ತವ್ಯ | ಬೆಂಗಳೂರು |

**ಸಾಕ್ಷಿಯನ್ನು ದಿನಾಂಕಃ 20-07-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಚಂದಾವರದ ಗಣಪತಿ ದೇವಸ್ಥಾನದ ಕೇರಿಯಲ್ಲಿ ನಮ್ಮ ಸ್ವಂತ ಮನೆ ಇರುತ್ತದೆ. ನಾನು ಕಳೆದ 5 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 06-05-2019 ರಂದು ನಾನು ಊರಿಗೆ ಬಂದಿದ್ದೆ. ಸದರಿ ದಿನದಂದು ನಮ್ಮ ಊರಿನಲ್ಲಿ ಬಂಡಿಹಬ್ಬ ಇತ್ತು. ಹಬ್ಬಕ್ಕಾಗಿ ನನ್ನ ದೊಡ್ಡಮ್ಮಳಾದ ಚಾಸಾ-9 ಉಮಾ ಗೋವಿಂದ ನಾಯ್ಕ ಸಹ ಬಂದಿದ್ದರು. ಚಾಸಾ-9 ರ ಮಗ ಅವರಿಗಾಗಿ ರೂ.70,000-00 ನಗದನ್ನು ಬೇರೆಯವರ ಮುಖಾಂತರ ಕಳುಹಿಸಿದ್ದರು. ಚಾಸಾ-9 ರವರು ಸದರಿ ಹಣವನ್ನು ಎಣಿಸಿ ಇಡಲು ನನ್ನ ತಾಯಿಯಾದ ಚಾಸಾ-1 ಮಂಗಳಾರವರಿಗೆ ನೀಡಿದ್ದರು. ನನ್ನ ತಾಯಿ ಸದರಿ ಹಣವನ್ನು ಗೋದ್ರೇಜ್ ಬೀರುವಿನಲ್ಲಿ ಇಟ್ಟಿದ್ದರು. ಎಲ್ಲರೂ ರಾತ್ರಿ 08-15 ರ ಸಮಯಕ್ಕೆ ದೇವಸ್ಥಾನದ ಬಳಿ ಹೋಗಿದ್ದೆವು. ಹೋಗುವ ಪೂರ್ವದಲ್ಲಿ ಮನೆಗೆ ಬೀಗ ಹಾಕಿ ಹೋಗಿದ್ದೆವು.

ರಾತ್ರಿ 09-45 ರ ಸಮಯಕ್ಕೆ ಮನೆಯ ಬಳಿ ಬಂದಾಗ ಮನೆಗೆ ಹಾಕಿದ್ದ ಬೀಗ ಇರಲಿಲ್ಲ. ಒಳಗೆ ಹೋಗಿ ನೋಡಲಾಗಿ ಗೋದ್ರೇಜ್ ಕಪಾಟು ತೆರೆದಿತ್ತು. ಅದನ್ನು ಪರಿಶೀಲಿಸಲಾಗಿ ಅದರೊಳಗೆ ಇಟ್ಟಿದ್ದ ನಗದು ಹಣ ರೂ.70,000-00 ಹಾಗೂ ಫ್ರಿಡ್ಜ ಮೇಲೆ ಇಟ್ಟಿದ್ದ ಒಂದು ಜೊತೆ ಕಿವಿಯೋಲೆ ಇರಲಿಲ್ಲ. ಸದರಿ ವಸ್ತುಗಳನ್ನು ಹುಡುಕಿದರೂ ಸಹ ಸಿಗದೇ ಇದ್ದದ್ದರಿಂದ ಠಾಣೆಗೆ ಹೋಗಿ ನಮ್ಮ ತಾಯಿ ಪಿರ್ಯಾದು ನೀಡಿರುತ್ತಾರೆ.

ದಿನಾಂಕ 04-08-2020 ರಂದು ಪೋಲಿಸರು ಇಬ್ಬರು ವ್ಯಕ್ತಿಗಳನ್ನು ನಮ್ಮ ಮನೆಯ ಬಳಿ ಕರೆತಂದು ಅವರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳು ಎಂದು ತಿಳಿಸಿರುತ್ತಾರೆ. ನಾವು ಸದರಿ ವ್ಯಕ್ತಿಗಳನ್ನು ಕೇಳಲಾಗಿ ಅವರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದಾಗಿ ತಿಳಿಸಿರುತ್ತಾರೆ. ಸದರಿ ವ್ಯಕ್ತಿಗಳು ಕಳ್ಳತನವನ್ನು ಯಾವ ರೀತಿ ಮಾಡಿದರು ಎನ್ನುವುದನ್ನು ತೋರಿಸಿರುತ್ತಾರೆ.

ಮಾರನೇ ದಿನ ಪೋಲಿಸರು ನಮ್ಮನ್ನು ಠಾಣೆಗೆ ಬರಲು ಹೇಳಿದಾಗ ನಾನು ಮತ್ತು ಚಾಸಾ-1 ಹೋಗಿದ್ದು ಠಾಣೆಯಲ್ಲಿ ಪೋಲಿಸರು ಕಿವಿಯೋಲೆ ತೋರಿಸಿರುತ್ತಾರೆ. ನಾವು ಅದನ್ನು ಗುರುತಿಸಿರುತ್ತೇವೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮುಮಾ-1 ನ್ನು ಗುರುತಿಸಿರುತ್ತಾರೆ. ಪೋಲಿಸರು ಕರೆತಂದಿದ್ದ ವ್ಯಕ್ತಿಗಳನ್ನು  ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ</u>**

ಮನೆಯಲ್ಲಿದ್ದ ಅಲ್ಮೆರಾದ ಬೀಗವನ್ನು ಹಾಕಿರುವುದಿಲ್ಲ. ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿಲ್ಲ ಮತ್ತು ಠಾಣೆಯಲ್ಲಿ ಆರೋಪಿಗಳು ಇರಲಿಲ್ಲ ಎಂದರೆ ಸರಿಯಲ್ಲ.  ಠಾಣೆಯಲ್ಲಿ ಪೋಲಿಸರು ನಮಗೆ ಕಿವಿಯೋಲೆಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.  ದಿನಾಂಕ 04-08-2020 ರಂದು ಪೋಲಿಸರು ಆರೋಪಿಗಳನ್ನು ನಮ್ಮ ಮನೆಯ ಬಳಿ ಕರೆತಂದಿರಲಿಲ್ಲ ಮತ್ತು ನಾವು ಆರೋಪಿಗಳನ್ನು ಯಾವುದೇ ವಿಚಾರ ಕೇಳಿಲ್ಲ ಮತ್ತು ಆರೋಪಿಗಳು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ರೀತಿಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.  ಆದರೂ ಸಹ ಆರೋಪಿಗಳ ವಿರುದ್ಧ ಪೋಲಿಸರ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**